ಜೊತೆಗಾರರೊಂದಿಗೆ ಆಡುತ್ತಿದ್ದೆ. ಆಟಗಳಲ್ಲಿ ನಾನು ಸಾಮಾನ್ಯವಾಗಿ ಮೇಲುಗೈ ಸಾಧಿಸುತ್ತಿದ್ದೆ. ಹಾಗಾಗಿ, ನನ್ನದೇ ಆದ ಅಹಂ ಒಂದು ನನ್ನೊಳಗೆ ನೆಲೆಯೂರಿತ್ತು ಅಥವಾ ಸುಲಭದಲ್ಲಿ ನಾನು ಯಾರಿಗೂ ಸೋಲೊಪ್ಪುತ್ತಿರಲಿಲ್ಲ ಅನ್ನಬಹುದು. ಏನಾದರೂ ಅನ್ಯಾಯವಾದರೆ ನನ್ನದೇ ಆದ ಪ್ರತಿರೋಧವನ್ನು ದಾಖಲಿಸುತ್ತಿದ್ದೆ. ಒಂದುದಿನ ನನ್ನ ಸಹಪಾಠಿ ಶಿವಣ್ಣ ಮತ್ತು ನಾನು ಗೋಲಿ ಆಟ ಆಡುತ್ತಿದ್ದೆವು. ಅವನದು ದಬಾವಣೆಯೂ ಜಾಸ್ತಿ ಮತ್ತು ಮುಂಗೋಪಿಯೂ ಆಗಿದ್ದ. ಗೋಲಿ ಆಡುತ್ತಿದ್ದಾಗ ಆಟದಲ್ಲಿ ಅವನಿಗೂ ನನಗೂ ಭಿನ್ನಾಭಿಪ್ರಾಯ ಬಂದು ಅದು ಜಗಳಕ್ಕೆ ತಿರುಗಿತು. ನಾನು ಮಾತಿನ ಭರದಲ್ಲಿ 'ನಿನ್ ಜಾತಿನ...' ಅಂತ ಬೈದೆ. ಆಗಲಾಗ ಶಿವಣ್ಣನ ಕೋಪ ಉಕ್ಕೇರಿತು. ಅವನು ನನ್ನ ಮುಖಕ್ಕೆ ಮುಖ ಕೊಟ್ಟು, 'ಏಯ್, ನನ್ನನ್ನ ಬೇಕಾದ್ರೆ ಬೈಯಿ, ನನ್ನ ಜಾತಿನ್ಯಾಕೆ ಬೈದಿಯ?' ಅಂತ ತಿರುಗಿ ಬಿದ್ದ. ನನಗೆ ಏನು ಉತ್ತರ ಹೇಳಬೇಕೊ ಗೋತ್ತಾಗಲಿಲ್ಲ. ಯಾಕೆಂದರೆ, ನಾನು ಆಟ ಆಡುತ್ತಿದ್ದುದು ಅವನ ಜಾತಿಯ ಕೇರಿಯಲ್ಲಿ. ಅವನ ಜಾತಿಯ ಜನರು ಹತ್ತಿರದಲ್ಲೇ ನಿಂತಿದ್ದರು. ಅವನು ತಿರುತಿರುಗಿ ಅದೇ ಪ್ರಶ್ನೆಗಳನ್ನು ಹಾಕತೊಡಗಿದ. ಅಲ್ಲಿ ನಾನು ಒಂಟಿ ಅನ್ನಿಸಿತು. ಹೆದರಿದೆ. ನನ್ನ ಮೈ ಸಣ್ಣಗೆ ಬೆವರತೊಡಗಿತು; ನಾಲಿಗೆ ತಡವರಿಸಿತು. ಆದರೂ ಧೈರ್ಯ ಮಾಡಿ, 'ನೀನ್ಯಾಕೆ ಗೋಲಿನ ಬದ್ದಿನಿಂದ (ಗುಳಿಯಿಂದ) ದೂರ ಇದ್ರು ಹತ್ತಿರಕ್ಕೆ ತಂದೆ' ಅಂತ ಕೇಳಿದೆ. ಅವನು 'ನಾನೆಲ್ಲಿ ತಂದೆ? ಅದು ಅಲ್ಲೇ ಇತ್ತು' ಅಂದ. ಹೀಗೆ ಮಾತಿಗೆ ಮಾತು ಬೆಳೆಯಿತು. ಆಗ, ನಮ್ಮಿಬ್ಬರ ಸಹಪಾಠಿಯಾದ ಜೋರು ಮಾತಿನ ಶೆಟ್ಟರ ನಾಗರಾಜ ಮಧ್ಯಸ್ಥಿಕೆಗೆ ಬಂದು ಪರಿಸ್ಥಿತಿಯನ್ನು ತಿಳಿಗೊಳಿಸಿದ. ಆಗಲೆ ನನಗೆ ಜಾತಿಯನ್ನು ಕೆಣಕಿದರೆ ಎಷ್ಟೊಂದು ಕಷ್ಟ ಅಂತ ಅರ್ಥವಾದುದು. ಪರೋಕ್ಷವಾಗಿ ಅದೊಂದು

